

ಗೋಲ್ಡ್ ಕೋಸ್ಟ್

ಮಹಾಯುದ್ಧದಲ್ಲಿ ಬದುಕಿ ಉಳಿದು ವಾಪಸ್ಸಾದ ಸೈನಿಕರು ಸಮುದ್ರ ದಂಡೆಯ ಬದಿಯಲ್ಲೇ ಬೆಟ್ಟ ಕೊರೆದು ಈ ರಸ್ತೆಯನ್ನು ನಿರ್ಮಿಸಿದ್ದರು.

ಈ ರಸ್ತೆಯಲ್ಲಿ ಪ್ರಯಾಣಿಸುವುದೇ ಒಂದು ಸುಂದರ ಅನುಭವ. ಒಂದು ಪಕ್ಕದಲ್ಲಿ ನೀಲ ಕಡಲು; ಮತ್ತೊಂದು ಪಕ್ಕದಲ್ಲಿ ಹಸಿರು ಕಾಡು. ಈ ರಸ್ತೆಯಲ್ಲಿ ಪಯಣಿಸಿ, 12 ಅಪೋಸ್ಟಲ್‌ಗಳು (ದೇವರ ಗುಡ್ಡಗಳು) ಇರುವ ಜಾಗವನ್ನು ತಲುಪಿದೆವು. ಸಮುದ್ರದಲ್ಲಿ ಪ್ರಕೃತಿಯೇ ಕಡೆದು ನಿಲ್ಲಿಸಿರುವ ಈ ದೇವಗುಡ್ಡಗಳನ್ನು ಹೆಲಿಕಾಪ್ಟರ್‌ನಿಂದ ನೋಡುವುದು ಒಂದು ಅದ್ಭುತವಾದ ಅನುಭವ. ಮೂರು ಅಥವಾ ಏಳು ಜನ ಕೂಡುವ ಸಣ್ಣ ಹೆಲಿಕಾಪ್ಟರ್‌ನಲ್ಲಿ ಏಳು ನಿಮಿಷಗಳ ಕಾಲ ಪಯಣಿಸಿ, ಈ ಸುಣ್ಣಕಲ್ಲಿನಿಂದ ಮಾಡಲ್ಪಟ್ಟ ಚಿತ್ರ–ವಿಚಿತ್ರ ಆಕಾರದ ಗುಡ್ಡಗಳನ್ನು ನೋಡಿ ಖುಷಿಪಟ್ಟೆವು. ಅನಂತರ ನಡೆದು ಹೋಗಿ, ಮತ್ತೊಮ್ಮೆ ನೋಡಿಬಂದೆವು.

## ಮೋಹಕ ಬ್ರಿಸ್ಬೇನ್

ಮೆಲ್ಬರ್ನ್‌ನಿಂದ ಬ್ರಿಸ್ಬೇನ್ ನಗರಕ್ಕೆ ವಿಮಾನದಲ್ಲಿ ಎರಡೂವರೆ ತಾಸಿನ ಪ್ರಯಾಣ. ನಗರಮಧ್ಯದಲ್ಲಿ ಹರಿಯುವ ನದಿಯಿಂದಲೇ ಈ ನಗರಕ್ಕೆ ಈ ಹೆಸರು. ಇಡೀ ನಗರದ ಚಟುವಟಿಕೆಗಳ ಹೃದಯ ಬಿಂದು. ನದಿಯ ಎರಡೂ ದಂಡೆಯ ಮೇಲಿರುವ ಕಟ್ಟಡಗಳು, ಪಾರ್ಕ್‌ಗಳು, ಆಟ–ಮನರಂಜನಾ ಕೇಂದ್ರಗಳು, ದೊಡ್ಡ ಜಾಯಿಂಟ್ ವ್ಹೀಲ್. ನೇಪಾಳಿಗಳು ಕಟ್ಟಿರುವ 'ಪಗೋಡ' ಇವೆಲ್ಲ ಪ್ರವಾಸಿಗರ ಪ್ರಮುಖ ಆಕರ್ಷಣೆ.

## ಕಿನ್ನರಲೋಕದ ಗೋಲ್ಡ್ ಕೋಸ್ಟ್

ಪ್ರವಾಸಿಗಳಿಗಾಗಿಯೇ ಸ್ಥಾಪಿಸಲ್ಪಟ್ಟಿರುವ, ಲೆಕ್ಕವಿಲ್ಲದಷ್ಟು ಹೋಟೆಲ್‌ಗಳು, ಮಾಲ್‌ಗಳಿರುವ ಈ ನಗರದ ಪ್ರಮುಖ ಆಕರ್ಷಣೆ ಎಂದರೆ ವಾರ್ನರ್ ಸಹೋದರರ ಮೂವಿವರ್ಲ್ಡ್. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಅನೇಕ ರೀತಿಯ ಆಟಗಳು, ಸವಾರಿಗಳು, ಸಂಗೀತ ನೃತ್ಯ, ಸ್ಟಂಟ್ ಪ್ರದರ್ಶನಗಳು ಇಲ್ಲಿವೆ. ಕಾರ್ಟೂನ್ ಪಾತ್ರಗಳಾದ ಬುನ್ನಿ, ಟ್ವೀಟಿ ಮತ್ತು ಡಪ್ಪಿಗಳ ವೇಷಧಾರಿಗಳು ನಮ್ಮನ್ನು ಕಿನ್ನರಲೋಕಕ್ಕೆ ಕರೆದೊಯ್ಯುತ್ತವೆ.

'ಭೂಗ್ರಹದ ಮಧ್ಯ ಭಾಗದಲ್ಲಿ' ಎಂಬ 4ಡಿ ಸಿನಿಮಾ ವೀಕ್ಷಕರಿಗೆ ರೋಮಾಂಚನ ಉಂಟುಮಾಡುತ್ತವೆ. ನಾಲ್ಕನೇ ಆಯಾಮವಾಗಿ ಸ್ಪರ್ಶ ನಮ್ಮಲ್ಲಿ ರೋಚಕತೆಯನ್ನು ಸೃಷ್ಟಿಸುತ್ತದೆ. ಭೂಕಂಪನದ ದೃಶ್ಯಬಂದಾಗ ನಮ್ಮ ಕುರ್ಚಿ ಅಲುಗಾಡುತ್ತದೆ. ಪರ್ವತಾಕರದ ಡೈನೋಸರಸ್‌ನ ಹೆಜ್ಜೆಯ ಕಂಪನದಿಂದ, ನಮ್ಮ ದೇಹವೂ ಕಂಪಿಸುತ್ತದೆ. ದೈತ್ಯ ಅಲೆಗಳು ಬಡಿದಾಗ, ನೀರು ನಮ್ಮ ಮೇಲೆ ಬೀಳುತ್ತದೆ!

ದಿನದ ಕಡೆಯಲ್ಲಿ ಎಲ್ಲ ಪಾತ್ರಧಾರಿಗಳ, ಕಲಾವಿದರ ಮೆರವಣಿಗೆ ನಡೆಯುತ್ತದೆ. ವಿವಿದ ದೇಶಗಳ ಊಟ ತಿಂಡಿಗಳು (ಭಾರತೀಯ ತಿಂಡಿಗಳೂ ಸೇರಿದಂತೆ) ನಮ್ಮ ನಾಲಿಗೆ– ಜಠರವನ್ನು ತಣಿಸಿದುವು. ಭಯಹುಟ್ಟಿಸಿ, ಉಸಿರುಗಟ್ಟಿಸಿ, ಮೈಜುಮ್ಮೆನಿಸುವ ರೈಡ್‌ಗಳನ್ನು ಮಾಡಿ ಸಂಭ್ರಮಿಸುವ ಜನರನ್ನು ನೋಡುವುದೇ ಒಂದು ಸೊಗಸು.

## ಗ್ರೇಟ್ ಆಸ್ಟ್ರೇಲಿಯನ್ ಷೋ

ಆಸ್ಟ್ರೇಲಿಯಾಕ್ಕೆ ಬಂದ ಪ್ರವಾಸಿಗಳಿಗೆ ಆಸ್ಟ್ರೇಲಿಯದ ಕಥೆಯನ್ನು ಹೇಳುವ ಚಮತ್ಕಾರಿ ಪ್ರದರ್ಶನವೇ 'ಗ್ರೇಟ್ ಆಸ್ಟ್ರೇಲಿಯನ್ ಷೋ'. ಮೆಲ್ಬರ್ನ್‌ಗೆ ಕ್ಯಾಪ್ಟನ್ ಕುಕ್ ಬಂದದ್ದು, ಬ್ರಿಟಿಷರ ವಸಾಹತು ಶುರುವಾಗಿದ್ದು, ಪ್ರಾರಂಭದಲ್ಲಿ ಆಸ್ಟ್ರೇಲಿಯಾವನ್ನು ಬಂದೀಖಾನೆಯಾಗಿ ಬಳಸಿದ್ದು, ಆದಿವಾಸಿಗಳ ಜೊತೆ ಒಪ್ಪಂದ, ಪ್ರಥಮ ಮಹಾಯುದ್ದದಲ್ಲಿ ಆಸ್ಟ್ರೇಲಿಯನ್ನರು ಭಾಗವಹಿಸಿದ್ದು, ಆಗ ಉಂಟಾದ ಸಾವುನೋವು, ಯುದ್ಧ ದೃಶ್ಯಗಳು, ಆಸ್ಟ್ರೇಲಿಯಾ ಪ್ರಕೃತಿ ವೈಭವ ಈ ಎಲ್ಲವೂ ಬೃಹತ್ ಪರದೆಯ ಮೇಲೆ ಮೂಡಿ ಕಣ್ ಕಟ್ಟಿದುವು.

ಪ್ರತಿಯೊಬ್ಬ ವೀಕ್ಷಕರಿಗೆ ಆಸ್ಟ್ರೇಲಿಯದ ಹ್ಯಾಟು ಕೊಟ್ಟು, ಊಟ–ಕಾಫಿಕೊಟ್ಟು ಸತ್ಕರಿಸಿದ ಪರಿ ಚೆನ್ನಾಗಿತ್ತು.

ಗೋಲ್ಡ್ ಕೋಸ್ಟ್‌ನ ಮತ್ತೊಂದು ಆಕರ್ಷಣೆ ಎಂದರೆ ಕರುಂಬಿಯನ್ ಪಕ್ಷಿ––ಪ್ರಾಣಿ ಸಂಗ್ರಹಾಲಯ. 'ಲೋರಿಕೀಟ್' ಎನ್ನುವ ಪಂಚವರ್ಣ ಗಿಳಿಗಳು, ವಿನಾಶದಂಚಿನಲ್ಲಿರುವ ಸೋಮಾರಿಗಳಾದ ಕೋಲಾಗಳು, ಸಣ್ಣ ಆಕಾರದ ಕಾಂಗರೂಗಳು, ಮೊಸಳೆಗಳು ಇಲ್ಲಿನ ಆಕರ್ಷಣೆ. ಗಿಳಿಗಳಿಗೆ ಮತ್ತು ಕಾಂಗರೂಗಳಿಗೆ ವೀಕ್ಷಕರು ಆಹಾರವನ್ನು ಉಣಿಸಬಹುದು.

ಹದಿಮೂರು ದಿನಗಳ ನಮ್ಮ ಪ್ರವಾಸದಲ್ಲಿ ನೋಡಿದ ಪ್ರತಿಯೊಂದೂ ಸ್ಥಳಗಳು ನಮ್ಮ ಅನುಭವಸಂಪತ್ತನ್ನು ಹೆಚ್ಚಿಸಿದವು. ಮರಳುವಾಗ ಮತ್ತೊಮ್ಮೆ ತಿರುಗಿ ಬರುವ ಆಸೆಯನ್ನೂ ಉಳಿಸಿದವು. ಆಸ್ಟ್ರೇಲಿಯಾ ಪ್ರವಾಸ ನಿಸರ್ಗದ ಅಗಾಧತೆಯ ಜೊತೆಗೆ ಮನುಷ್ಯ ವಿವೇಕದ ಮಿಳಿತವನ್ನು ಒಟ್ಟಿಗೆ ಕಾಣಿಸುತ್ತದೆ. ಪ್ರಕೃತಿ ಹರಸಿದ ನಾಡುಗಳು ಸಾಕಷ್ಟಿರುತ್ತವೆ. ಆದರೆ, ಆ ಪ್ರಕೃತಿಯನ್ನು ಕನ್ನಡಿಯಂತೆ ಉಳಿಸಿಕೊಳ್ಳಬೇಕಾದ ಹೊಣೆ ನಮ್ಮದೇ ಅಲ್ಲವೇ?